ಶಿವಮೊಗ್ಗ ನಗರದ ಕಲ್ಲಹಳ್ಳಿ ಬಡಾವಣೆಯಲ್ಲಿ ಮನೆಯೊಂದರ ಹಂಚಿಕೆ.

೧೧೦೩. ಶ್ರೀ ಬಿ ಸ್ವಾಮಿರಾವ್ (ಹೊಸನಗರ).—— ಮಾನ್ಯ ಸಾರಿಗೆ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ನಗರದ ಗೃಹ ನಿರ್ಮಾಣ ಮಂಡಳಿಯ ಕಲ್ಲಹಳ್ಳಿ ಬಡಾವಣೆಯ ಮನೆ ಸಂಖ್ಯೆ ೪೭ ಯಾರಿಗೆ ಮಂಜೂರಾಗಿತ್ತು ? ಈಗ ಯಾರಿಗೆ ಮಂಜೂರಾಗಿದೆ ?

ಆ) ಮೊದಲನೆಯ ಬಾರಿ ಮಂಜೂರಾಗಿ ತಿರಸ್ಕೃತವಾದಲ್ಲಿ ಪುನರ್ ಮಂಜೂರಾತಿಯ ನಿಯಮಗಳೇನು ? ಹಾಗೂ ಪ್ರಸ್ತುತ ಪ್ರಕರಣಗಳಲ್ಲಿ ಅವುಗಳನ್ನು ಪಾಲಿಸಲಾಗಿದೆಯೆ ?

ಇ) ಇಂತಹ ಮನೆಗಳನ್ನು ಬಾಡಿಗೆಗೆ ಕೊಡಲು ಅವಕಾಶವಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಮಧ್ಯಮ ಆದಾಯ ವರ್ಗದ ೪೭ ನೇ ಸಂಖ್ಯೆಯ ಮನೆ ಇರುವುದಿಲ್ಲ. ಅಲ್ಪ ಆದಾಯ ವರ್ಗದ ೪೭ನೇ ಸಂಖ್ಯೆ ಮನೆ ಶ್ರೀ ಬಿ.ಉಮೇಶ್ ರವರಿಗೆ ಮಂಜೂರಾಗಿದೆ. ಆರ್ಥಿಕ ದುರ್ಬಲ ವರ್ಗದ ೪೭ನೇ ಸಂಖ್ಯೆ ಮನೆ ಶ್ರೀ ಬ. ಕೋದಂಡಪ್ಪನವರಿಗೆ ಮಂಜೂರಾಗಿದೆ. ಮನೆಗಳು ಮೊದಲು ಮಂಜೂರಾದವರ ಹೆಸರಿನಲ್ಲಿವೆ,

ಆ) ಮಂಜೂರಾತಿ ನಿಯಮಗಳಂತೆ ತಿರಸ್ಕೃತವಾದ ನಂತರ ಕಾದಿರಿಸಲಾದ ಪಟ್ಟಿಯಲ್ಲಿರುವವರಿಗೆ ಕೊಡಲಾಗುವುದು ಕಾದಿರಿಸಲಾದ ಪಟ್ಟಿಯಲ್ಲಿರುವವರಿಗೆ ತಿರಸ್ಕೃತ ಮನೆಗಳನ್ನು ಮಂಜೂರು ಮಾಡಿ ಉಳಿದಿರುವ ಮನೆಗಳನ್ನು ಅರ್ಹತೆಯುಳ್ಳಂತಹ ಇತರೇ ಅರ್ಜಿದಾರರಿಗೆ ಕೊಡಲಾಗುವುದು. ಈ ಪ್ರಕರಣದಲ್ಲಿ ಮೊದಲ ಮಂಜೂರಾತಿ ತಿರಸ್ಕೃತವಾಗಿಲ್ಲ.

ಇ) ಇಲ್ಲ.

ದಾವಣಗೆರೆ ಸಮೀಪದ ತೋಳಹುಣಸೇ ರೇಷ್ಮೆನೂಲು ಬಿಚ್ಚುವ ಘಟಕದಲ್ಲಿ ಬಟ್ಟೆ ತಯಾರು ಮಾಡುವುದು.

೧೨೭೬. ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ರೇಷ್ಮೆ ವ್ಯವಸಾಯದ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದ ಬಳಿ ತೋಳಹುಣಸೇ ರೇಷ್ಮೆ ನೂಲು ಬಿಚ್ಚುವ ಘಟಕ ಪ್ರಾರಂಭಿಸಿರುವುದು ನಿಜವೇ ?

ಆ) ಈ ಘಟಕದಲ್ಲಿ ಬಟ್ಟೆ ತಯಾರು ಮಾಡುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ವ್ಯವಸಾಯದ ರಾಜ್ಯ ಮಂತ್ರಿಗಳು).—

ಅ) ಸಾಧು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ರಾಜಾಜಿನಗರದ ಸಾಣೆಗುರುವನಹಳ್ಳಿ ಕೆರೆಯ ಉಪಯೋಗದ ಬಗ್ಗೆ.

೧೨೪೧. ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರದ ಶಿವನಹಳ್ಳಿ ಹಿಂಭಾಗದಲ್ಲಿ ಸಾಣೆಗುರುವನಹಳ್ಳಿ ಕೆರೆ ಅಂಗಳವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?